**ದಿನಾಂಕ: 28-03-2026ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 1ನೇ ಪ್ರತಿವಾದಿ ಪರ ಶ್ರೀ ಎ.ಡಿ. ವಕೀಲರಿಂದ**

1. 2 ರಿಂದ 4ನೇ ವಾದಿಯರು ಶಾಲೆ ಕಲಿತಿಲ್ಲ. ನನ್ನ ಗಂಡ ಶಾಲೆ ಕಲಿತಿಲ್ಲ. ಗಿರಿಮಲ್ಲಪ್ಪನ ತಂದೆಯ ಹೆಸರು ಮರೆಪ್ಪ ಎಂದರೆ ಸರಿ. ಮರೆಪ್ಪನ ತಂದೆಯ ಹೆಸರು ಗೊತ್ತಿಲ್ಲ. ಮರೆಪ್ಪನ ಅಡ್ಡಹೆಸರು ಗೋಪಾಲಕರ್. ಮರೆಪ್ಪನ ಅಡ್ಡಹೆಸರು ಗೋಪಾಲಕರ್ ಮತ್ತು ಸುಭಾಶರವರ ಅಡ್ಡ ಹೆಸರು ಗೋಪಾಲಕರ್ ಎಂದು ತೋರಿಸಲು ದಾಖಲೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಮರೆಪ್ಪ ತೀರಿಕೊಂಡು 45 ವರ್ಷ ಆಗಿದೆ ಎಂದರೆ 21 ವರ್ಷ ನಡೆದಿದೆ ಎಂದು ಉತ್ತರಿಸುತ್ತಾರೆ.

2. ದಾವಾದ ಆಸ್ತಿ ಈಗ 1ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. 45 ವರ್ಷಗಳಿಂದ ಪಹಣಿ 1ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. 45 ವರ್ಷಗಳಿಂದ 1ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಬೆಳೆ ನಿಮಗೆ ಕೊಟ್ಟಿಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡು 21 ವರ್ಷ ಆಗಿರುತ್ತದೆ. ನನ್ನ ಗಂಡ ಜೀವಂತ ಇದ್ದಾಗ 1ನೇ ಪ್ರತಿವಾದಿಗೆ ಪಾಲು ಕೇಳಿರುತ್ತಾರೆ. ನಾನು ಸಹ 1ನೇ ಪ್ರತಿವಾದಿಗೆ ಪಾಲ ಕೇಳಿರುತ್ತೇನೆ.

3. ನಿಮ್ಮ ಗಂಡ ಮರೆಪ್ಪನ ಮಗ ಎಂದು ತೋರಿಸಲು ಏನು ದಾಖಲೆ ಹಾಜರುಪಡಿಸಿದ್ದೀರಿ ಎಂದರೆ ನನ್ನ ಗಂಡ ಮತ್ತು ನನ್ನ ಮಾವನ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಮರೆಪ್ಪನಿಗೆ 1ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿಯಲ್ಲ. ಮರೆಪ್ಪನಿಗೆ 1ನೇ ಪ್ರತಿವಾದಿ ಒಬ್ಬನೇ ಮಗ ಇರುವುದರಿಂದ ಅವನ ಹೆಸರಿಗೆ ಪಹಣಿ ಆಗಿದೆ ಎಂದರೆ ಸರಿಯಲ್ಲ. ನನ್ನ ಮದುವೆ ಆಗಿ 40 ವರ್ಷ ಮೇಲೆ ಆಗಿರುತ್ತವೆ. ನೀವಾಗಲೀ ನಿಮ್ಮ ಗಂಡನಾಗಲೀ ಮರೆಪ್ಪನಿಗೆ ಮತ್ತು 1ನೇ ಪ್ರತಿವಾದಿಗೆ

ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ನಿಮಗೆ ಯಾವುದೇ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ